# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿತ್ರದುರ್ಗ</u>

## ಸ್ಪೆಷಲ್ ಕೇಸ್(ಪಿ.ಸಿ.) ಸಂಖ್ಯೆ: 03/2020

ಪಿಡಬ್ಲ್ಯೂ: 08
ಸಿಡಬ್ಲ್ಯೂ: 13

<u>ದಿನಾಂಕಃ **24-10-2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>

| | |
|---|---|
| ಸಾಕ್ಷಿದಾರರ ಹೆಸರು | ಃ ಕೆ.ಬಿ. ಯತಿರಾಜ್ |
| ತಂದೆಯ ಹೆಸರು | ಃ ಎಂ.ಕೆ. ಬಸವರಾಜಪ್ಪ |
| ವಯಸ್ಸು | ಃ 40 ವರ್ಷ |
| ಉದ್ಯೋಗ | ಃ ಮುಖ್ಯ ಪೇದೆ, ಗ್ರಾಮಾಂತರ ಠಾಣೆ |
| ವಾಸ ಸ್ಥಳ | ಃ ಚಿತ್ರದುರ್ಗ |

<u>ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರವರಿಂದಃ</u>

**2017** ರಿಂದ **2022** ರವರೆಗೆ ನಾನು ಎಸಿಬಿ ಪೊಲೀಸ್ ಠಾಣೆ, ಚಿತ್ರದುರ್ಗದಲ್ಲಿ ಪೇದೆ ಎಂದು ಸೇವೆ ಸಲ್ಲಿಸಿದ್ದೇನೆ. ದಿನಾಂಕ **14–02–2019** ರಂದು ತನಿಖಾಧಿಕಾರಿ ಪ್ರಕಾಶ್ ರವರು ನಮ್ಮ ಠಾಣೆಯಲ್ಲಿ ವಹಿಸುವಿಕೆ ಪಂಚನಾಮೆ ಕೈಗೊಂಡ ಕಾಲಕ್ಕೆ ಅದನ್ನು ನಾನು ಅವರ ಉಕ್ತಲೇಖನದಂತೆ ಲ್ಯಾಪ್ ಟಾಪಿನಲ್ಲಿ ಟೈಪ್ ಮಾಡಿದೆ. ಸದರಿ ಮಹಜರನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ–**2** ಎಂದು ಗುರುತಿಸಿದ್ದು ನನ್ನ ಸಹಿಯನ್ನು ನಿಪಿ–**2**(ಬಿ) ಎಂದು ಗುರುತಿಸಲಾಯಿತು. ಅಲ್ಲದೇ ಅದೇ ದಿನ ಚಳ್ಳಕೆರೆ ಸರ್ವೆ ಕಛೇರಿಯಲ್ಲಿ ಟ್ರಾಪ್ ಪಂಚನಾಮೆ ಕಾಲಕ್ಕೆ ನಾನು ಇಲಾಖೆ ವತಿಯಿಂದ ನೀಡಿದ ಸೋನಿ ಕ್ಯಾಮೇರಾದಲ್ಲಿ ಸದರಿ ಪಂಚನಾಮೆಯ ಪ್ರಮುಖ ಘಟನಾವಳಿಗಳ ಪೊಟೋಗಳನ್ನು ತೆಗೆದಿದ್ದೇನೆ. ಆ ಪೊಟೋಗಳನ್ನು ನೋಡುತ್ತಿದ್ದು ಅವುಗಳನ್ನು ನಿಪಿ–**15** ರಿಂದ **21** ಎಂದು ಈಗಾಗಲೇ ಗುರುತಿಸಲಾಗಿದೆ. ಅದೇ ದಿನ ಆರೋಪಿತನನ್ನು ನಮ್ಮ ಠಾಣೆಯಲ್ಲಿರಿಸಿಕೊಳ್ಳಲಾಗಿತ್ತು, ಆ ಕಾಲಕ್ಕೆ ನಾನು ಬೆಂಗಾವಲು ಸಿಬ್ಬಂದಿ ಎಂದು ಕರ್ತವ್ಯ ನಿರ್ವಹಿಸಿದ್ದೇನೆ.

**2.** ದಿನಾಂಕ **15–02–2019** ರಂದು ಪಿರ್ಯಾದುದಾರನ ಮಾದರಿ ಧ್ವನಿ ಸಂಗ್ರಹಣೆ ಕಾಲಕ್ಕೆ ತನಿಖಾಧಿಕಾರಿಯವರ ಸೂಚನೆಯಂತೆ ಪೊಟೋಗಳನ್ನು ತೆಗೆದಿದ್ದೇನೆ. ಅವುಗಳನ್ನು ನೋಡುತ್ತಿದ್ದು ಸದರಿ ಪೊಟೋಗಳನ್ನು ನಿಪಿ–**23** ಹಾಗೂ **24** ಎಂದು ಈಗಾಗಲೇ ಗುರುತಿಸಲಾಗಿದೆ. ಲ್ಯಾಪ್ ಟಾಪ್ ಬಳಸಿದ ಬಗ್ಗೆ ಕಲಂ **65** ಬಿ ಅನ್ವಯ ದೃಢೀಕರಣ ನೀಡಿದ್ದೇನೆ. ಅದನ್ನು ನೋಡುತ್ತಿದ್ದು ನಿಪಿ–**33** ಎಂದು ಈಗಾಗಲೇ ಗುರುತಿಸಲಾಗಿದ್ದು ನನ್ನ ಸಹಿಯನ್ನು ನಿಪಿ–**33**(ಬಿ) ಎಂದು ಗುರುತಿಸಲಾಯಿತು. ದಿನಾಂಕ **15–02–2019** ರಂದು ತನಿಖಾಧಿಕಾರಿ ನನ್ನ ಹೇಳಿಕೆ ಮಾಡಿಕೊಂಡಿದ್ದಾರೆ. ಟ್ರಾಪ್ ಪಂಚನಾಮೆಯಲ್ಲಿ ನನ್ನ ಸಹಿ ಇದ್ದು ಸದರಿ ಸಹಿಯನ್ನು ನಿಪಿ–**4**(ಡಿ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು: ಶ್ರೀ ಎಂ.ಸಿ.ಟಿ. ವಕೀಲರಿಂದ ಆರೋಪಿತನ ಪರವಾಗಿಃ</u>

**3.** ನಮ್ಮ ಎಸಿಬಿ ಕಛೇರಿಯ ಪೊಲೀಸ್ ಇನ್ಸ್ ಪೆಕ್ಟರ್ ರವರ ರೂಂನಲ್ಲಿ ದಿನಾಂಕ **14–02–**

**2019** ರಂದು ಮದ್ಯಾಹ್ನ **4.15** ರಿಂದ **5.10** ರವರೆಗೆ ವಹಿಸುವಿಕೆ ಪಂಚನಾಮೆಯನ್ನು ಟೈಪ್ ಮಾಡಿದ್ದೇನೆ. ನಾನು ಆ ರೀತಿ ಪಂಚನಾಮೆಯನ್ನು ಟೈಪ್ ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಈ ಕೇಸಿಗೋಸ್ಕರ ಟ್ರಾಪ್ ಪಂಚನಾಮೆ ಕಾಲಕ್ಕೆ ನಿಪಿ–**15** ರಿಂದ **21** ರಂತೆ ಇಲಾಖಾ ಕ್ಯಾಮೇರಾ ಬಳಸಿ ಪೊಟೋಗಳನ್ನು ತೆಗೆದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಪಿರ್ಯಾದುದಾರರ ಮಾದರಿ ಧ್ವನಿ ಸಂಗ್ರಹ ಕಾಲಕ್ಕೆ ಪೊಟೋಗಳನ್ನು ತೆಗೆದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಿಪಿ–**33** ರಂತೆ ನನಗೆ ದೃಢೀಕರಣ ನೀಡಲು ಅಧಿಕಾರವಿಲ್ಲ ಮತ್ತು ನಾನು ಅದನ್ನು ನೀಡಿಲ್ಲ ಎನ್ನುವುದು ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ಕರ್ತವ್ಯವನ್ನು ನಿರ್ವಹಿಸದೇ ಇದ್ದಾಗ್ಯೂ ನಮ್ಮ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆ: ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.